ದಿನಾಂಕ: 08.12.2017ರ ಶುಕ್ರವಾರದಂದು ಅಪರಾಹ್ನ 3.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಮಾಸಿಕ ಸಾಮಾನ್ಯ ಸಭೆಯ ನಡಾವಳಿ.

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಮಾನ್ಯ ಶ್ರೀ ಎ.ಸಿ. ದೇವಯ್ಯರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1. | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 2. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. | 2. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. |
| 3. | ಮಾನ್ಯ ಶ್ರೀ ಎಂ.ಪಿ.ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 3. | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಚೆಸ್ಕಾಂ, ಮಡಿಕೇರಿ. |
| 4. | ಮಾನ್ಯ ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 4. | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು |
| 5. | ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರು ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 5. | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 6. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | | |
| 7. | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | | |
| 8. | ಆಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | | |
| 9. | ಸಹಾಯಕ ನಿರ್ದೇಶಕರು, ನ.ಯೋ.ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ | | |
| 10. | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಪುತ್ತೂರು | | |
| 11. | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ | | |
| 12. | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. | | |
| 13. | ಕು॥ ಸೌಮ್ಯ. ಎಂ.ಎನ್. ಆಯುಕ್ತರು(ಪ್ರ),<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು, ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು ಮತ್ತು ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು ಮತ್ತು ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರುಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. . . .

ಹಿಂದಿನ ಸಭಾ ನಡಾವಳಿಯನ್ನು ಅಂಗೀಕರಿಸುವ ಮೊದಲು ಸಭೆಯಲ್ಲಿ ಹಾಜರಿದ್ದ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು ಸಭೆಯಲ್ಲಿ, ದಿನಾಂಕ:16.01.2001ರ ಪ್ರಾಧಿಕಾರದ ಸಭೆಯಲ್ಲಿ ಕೃಷಿ ಉಪಯೋಗದಲ್ಲಿ ಬರುವ ಜಮೀನಿನಲ್ಲಿ 10ಸೆಂಟ್‌ಗೆ ಮೀರದಂತೆ ವಸತಿ ಉಪಯೋಗಕ್ಕೆ ಭೂ ಪರಿವರ್ತನೆ ಮಾಡಲು ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ನೀಡುವ ಬಗ್ಗೆ ಆಯುಕ್ತರು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಿರುವ ಪ್ರಸ್ತಾವನೆ ಬಗ್ಗೆ ಪ್ರಾಧಿಕಾರದ ಆಯುಕ್ತರು ಈಗ ಸರ್ಕಾರದ ಅನುಮೋದನೆಯನ್ನು ಕೋರಿರುವುದನ್ನು ಪ್ರಶ್ನಿಸಿ, ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 9 ಗ್ರಾಮಗಳಲ್ಲಿ ಮನೆ ನಿರ್ಮಿಸುವ ಸಂಬಂಧ ನಾಗರೀಕರು 5 ರಿಂದ 10 ಸೆಂಟ್‌ಗಳ ವರೆಗೆ ನಿವೇಶನವನ್ನು ಭೂ ಪರಿವರ್ತಿಸಲು ಅನುಮೋದನೆ ಕೋರುವ ಪ್ರಸ್ತಾವನೆಗೆ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ನೀಡುತಿಲ್ಲವೆಂದು ಅನೇಕರು ಬಂದು ತಿಳಿಸಿರುತ್ತಾರೆ. ಈ ಬಗ್ಗೆ ಈ ಹಿಂದೆಯೇ ತೀರ್ಮಾನಿಸಿರುವಂತೆ 15ಸೆಂಟ್‌ಗೆ ಮಿತಿಗೊಳಿಸಿ ಕೃಷಿ ಜಮೀನಿನಲ್ಲಿ ವಸತಿ ಉದ್ದೇಶದ ಕಟ್ಟಡ ನಿರ್ಮಿಸಲು ತಾಂತ್ರಿಕ ಅಭಿಪ್ರಾಯ ನೀಡುವುದಕ್ಕೆ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳು ಒಮ್ಮತ ವ್ಯಕ್ತಪಡಿಸಿದರು.

ಇದಕ್ಕೆ ಪ್ರಾಧಿಕಾರದ ಆಯುಕ್ತರು ಪ್ರತಿಕ್ರಿಯೆ ನೀಡುತ್ತಾ, ಈಗಾಗಲೇ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿರ್ದೇಶನವನ್ನು ಕೋರಲಾಗಿದ್ದು, ಈ ಬಗ್ಗೆ ಸರ್ಕಾರವು ಸ್ಪಷ್ಟ ಅಭಿಪ್ರಾಯವನ್ನು ನೀಡುತ್ತಾರೆಂಬ ಸೂಚನೆಯನ್ನು ನೀಡಿ, ಸರ್ಕಾರದ ಆದೇಶದಂತೆ ಕ್ರಮ ವಹಿಸಲಾಗುವುದೆಂದು ತಿಳಿಸುತ್ತಾ, ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರ ವಲಯನಿಯಾಮಾವಳಿಗಳಲ್ಲಿ ಈಗಾಗಲೇ ಚಿಕ್ಕಮಗಳೂರು ಮತ್ತು ಉಡುಪಿ ನಗರಗಳು ಅಳವಡಿಸಿಕೊಂಡಿರುವಂತೆ ಮಡಿಕೇರಿ ನಗರದ ಭೌಗೋಳಿಕ ಅಂಶಗಳನ್ನು ಪರಿಗಣಿಸಿ, ಕೃಷಿ ಉಪಯೋಗದ ಜಮೀನನ್ನು ವಸತಿ ಉದ್ದೇಶಕ್ಕೆ 15ಸೆಂಟ್‌ಗೆ ಮಿತಿಗೊಳಿಸಿ ಕೃಷಿ ಜಮೀನಿನಲ್ಲಿ ವಸತಿ ಉದ್ದೇಶದ ಕಟ್ಟಡ ನಿರ್ಮಿಸಲು ತಾಂತ್ರಿಕ ಅಭಿಪ್ರಾಯ ನೀಡಲು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರುವ ಪ್ರಸ್ತಾವನೆಗೆ ಇರಬೇಕಾದ ರಸ್ತೆಯ ಕನಿಷ್ಟ ಅಗಲದ ಬಗ್ಗೆ, ತೋಟದ ಮನೆ ನಿರ್ಮಿಸಲು ಹಾಗೂ ಇನ್ನಿತರ ಅವಶ್ಯವಿರುವ ಅಂಶಗಳಿಗೆ ಬದಲಾವಣೆಯನ್ನು ತಂದು ವಲಯನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಿ ಅಳವಡಿಸಿಕೊಳ್ಳಲು ಸರ್ಕಾರದ ಮಂಜೂರಾತಿಯನ್ನು ಪಡೆದುಕೊಂಡು ಕ್ರಮ ವಹಿಸಬಹುದೆಂದು ಸಭೆಯಲ್ಲಿ ಮಾಹಿತಿಯನ್ನು ನೀಡಿದರು.

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ವಿಧಾನ ಸಭಾ ಸದಸ್ಯರು, ಈಗಾಗಲೇ ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರ ಮಹಾಯೋಜನೆ ಪರಿಷ್ಕೃತ–(ಅಂತಿಮ) 2021ರ ವಲಯನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ನಾವೆಲ್ಲರೂ ಒಟ್ಟಾಗಿ ಸರ್ಕಾರದಲ್ಲಿ ವ್ಯವಹರಿಸಿ, ಆದಷ್ಟು ಶೀಘ್ರವಾಗಿ ಸರ್ಕಾರದಿಂದ ಮಂಜೂರಾತಿಯನ್ನು ಪಡೆದುಕೊಳ್ಳಲು ಕ್ರಮ ವಹಿಸಬೇಕೆಂದು ಆಯುಕ್ತರಿಗೆ ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ: 19.05.2017 ರಂದು ನಡೆದ ಪ್ರಾಧಿಕಾರದ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು .

**ನಿರ್ಣಯ:–** ಹಿಂದಿನ ಸಭೆಯ ಪ್ರಾಧಿಕಾರದ ಸಭಾ ನಡಾವಳಿಯನ್ನು ಓದಲಾಯಿತು. ಸದರಿ ನಡಾವಳಿಯಲ್ಲಿ ವಿಷಯಸಂಖ್ಯೆ 5 ಮತ್ತು ವಿಷಯಸಂಖ್ಯೆ 17(5) ಈ ಎರಡು ವಿಷಯಗಳು ಇಂದಿನ ಸಭಾ ಅನುಮೋದನೆಗಾಗಿ ಮಂಡಿಸುತ್ತಾ, ಉಳಿದಂತೆ ಹಿಂದಿನ ಸಭಾ ನಡಾವಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ 5:–** ಶ್ರೀ ಅಪ್ಪರಾವ್ ಮತ್ತು ಸುಬ್ಬಾಯಮ್ಮರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್‌ರವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 543/73 ರಲ್ಲಿನ 18.95 ಎಕರೆ ಮತ್ತು ಸರ್ವೆ ನಂಬರ್ 543/74 ರಲ್ಲಿನ 19.10 ಎಕರೆ ಒಟ್ಟು 38.05ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆಗೆ ಅನುಮೋದನೆ ಮಾಡಿಕೊಡುವಂತೆ ಕೋರಿರುವ ಬಗ್ಗೆ ಸ್ಥಳ ಪರಿಶೀಲಿಸಿ, ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ತೀರ್ಮಾನಿಸಲಾಗಿತ್ತು. ಅದರಂತೆ ಪ್ರಸಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

ಸದರಿ ಜಮೀನನ್ನು ಆಯುಕ್ತರು/ನಗರಯೋಜನಾ ಸದಸ್ಯರು, ಸಹಾಯಕ ನಗರ ಯೋಜಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿರವರೊಂದಿಗೆ ಸ್ಥಳ ಪರಿಶೀಲನೆ ಮಾಡಿರುವ ಬಗ್ಗೆ ಸ್ಥಳ ವಿವರಣೆಯನ್ನು ಸಭೆಯಲ್ಲಿ ನೀಡಿದರು. ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಮತ್ತೊಮ್ಮೆ ಸುಧೀರ್ಘವಾಗಿ ಚರ್ಚಿಸಿ, ಸದರಿ ಜಮೀನು ಸಮತಟ್ಟವಾಗಿರದೆ ಬೆಟ್ಟ ಮತ್ತು ಇಳಿಜಾರು ಪ್ರದೇಶದಿಂದ ಕೂಡಿರುವುದರಿಂದ ಜಮೀನಿನ Topographical Condition ಅನ್ನು ಪರಿಶೀಲಿಸಿ ಜಮೀನಿನ ಮೇಲ್ಮೈ ಲಕ್ಷಣಗಳಿಗೆ ಅನುಗುಣವಾಗಿ ಮತ್ತು ಕಾಂಟೂರ್ ರೇಖೆಗಳಿಗೆ ಸಮನಾಂತರವಾಗಿ ರಸ್ತೆಯನ್ನು ಅಳವಡಿಸುವ, ವಿನ್ಯಾಸವನ್ನು ಅಳವಡಿಸುವ ಭೂ ಕುಸಿತ ಉಂಟಾಗದಂತೆ ತಡೆಗೋಡೆ ನಿರ್ಮಿಸುವುದು, ಮಣ್ಣಿನ ಸವಕಳಿಯನ್ನು ತಡೆಯಲು ಸಾಧ್ಯವಾದಷ್ಟು ಮಟ್ಟಿಗೆ ಗಿಡ ಮರಗಳನ್ನು ಬೆಳೆಸುವುದು, ಹಾಲಿ ಹರಿಯುತ್ತಿರುವ ತೋಡಿನ ಎರಡು ಬದಿಗಳಲ್ಲಿ ಬಫರ್ ಅಳವಡಿಸುವುದು, ಸದರಿ ವಿನ್ಯಾಸ ನಕ್ಷೆಯ ನಿವೇಶನಗಳಲ್ಲಿ ಕಟ್ಟಡದ ಎತ್ತರವನ್ನು ನೆಲ+1ನೇ ಅಂತಸ್ತಿಗೆ ಮಿತಿಗೊಳಿಸುವುದು, ನಿರ್ಮಾಣ ಸಂದರ್ಭಗಳಲ್ಲಿ ಯಾವುದೇ ತರಹದ ಹಾನಿ ಉಂಟಾಗದಂತೆ ಜಮೀನಿನ ಮಾಲೀಕರು ಮುನ್ನೆಚ್ಚರಿಗೆ ವಹಿಸುವುದು. ಈ ಎಲ್ಲಾ ಷರತ್ತುಗಳಿಗೆ ಒಳಪಟ್ಟು ವಲಯನಿಯಮಾವಳಿಗಳನ್ವಯ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 543/73 ರಲ್ಲಿನ 18.95 ಎಕರೆ ಮತ್ತು ಸರ್ವೆ ನಂಬರ್ 543/74 ರಲ್ಲಿನ 19.10 ಎಕರೆ ಒಟ್ಟು 38.05ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ 17(5):–** ಶ್ರೀ ಬಿ.ಎನ್. ರತ್ನಾಕರ ರೈ, ಬಿನ್॥ ಬಿ.ಎಸ್.ನಾರಾಯಣ ರೈ, ಮೇಕೇರಿ ಗ್ರಾಮ, ಕಗ್ಗೋಡ್ಲು ಅಂಚೆ, ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ. 30/6 ರಲ್ಲಿನ 1.05 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೋಟೇಲ್ ಕಂ ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ ಸ್ಥಳ ಪರಿಶೀಲಿಸಿ,

ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ತೀರ್ಮಾನಿಸಲಾಗಿತ್ತು. ಅದರಂತೆ ಪ್ರಸಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಈ ಬಗ್ಗೆ ಆಯುಕ್ತರು/ನಗರಯೋಜನಾ ಸದಸ್ಯರು, ಸಹಾಯಕ ನಗರ ಯೋಜಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ ರವರೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸದರಿ ಜಮೀನಿನಲ್ಲಿ ಅರ್ಜಿದಾರರು ಈಗಾಗಲೇ ಪ್ರಾಧಿಕಾರದ ತಾಂತ್ರಿಕ ಅನುಮೋದನೆಯನ್ನು ಪಡೆದುಕೊಳ್ಳದೆ 1+2ನೇ ಅಂತಸ್ತಿನ ಕಟ್ಟಡವನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ ಎಂದು ಆಯುಕ್ತರು ಸಭೆಯಲ್ಲಿ ಮಾಹಿತಿಯನ್ನು ನೀಡಿದರು.

ಆಯುಕ್ತರು ಮತ್ತು ನಗರಯೋಜನಾ ಸದಸ್ಯರು ನೀಡಿದ ವಿವರಗಳನ್ನು ಪರಿಗಣಿಸಿ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಅರ್ಜಿದಾರರು ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸಿರುವ ವಿಷಯದೊಂದಿಗೆ ಪ್ರಸ್ತಾವನೆಯನ್ನು ವಸತಿ ಉಪಯೋಗದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಕಂ ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಬಹುಮತದಿಂದ ಅಂಗೀಕಾರ ನೀಡಿತು.

**2) ವಿಷಯ ಸಂಖ್ಯೆ 2:–**

ಏಪ್ರಿಲ್ 2017ನೇ ತಿಂಗಳಿನಿಂದ ಅಕ್ಟೋಬರ್ 2017ರ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1 | ಪರಿಶೀಲನಾ ಶುಲ್ಕ. | ರೂ. | 1,57,732.00 |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 1,55,638.00 |
| 3 | ಕೆರೆ ಅಭಿವೃದ್ಧಿ ಶುಲ್ಕ | ರೂ. | 6,37,920.00 |
| 4 | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 28,000.00 |
| 5 | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ<br>1. ಇಂಡಿಯನ್ ಬ್ಯಾಂಕು | ರೂ. | 2,78,850.00 |
| | 2. ಇಂಡಿಯನ್ ಬ್ಯಾಂಕು (ಅಕ್ರಮ – ಸಕ್ರಮ) | ರೂ. | 7,637.00 |
| 6 | 3. ಕಾವೇರಿ ಗ್ರಾಮೀಣ ಬ್ಯಾಂಕು (ಪಾರ್ಕ್ ಮತ್ತು ಸಿ.ಎ) | ರೂ. | 37,757.00 |
| 7 | 4. ಕಾವೇರಿ ಗ್ರಾಮೀಣ ಬ್ಯಾಂಕು (ಕೆರೆ ಅಭಿವೃದ್ಧಿ) | ರೂ. | 4,27,050.00 |
| 8 | ಸಮಾಜ ಕಲ್ಯಾಣ ಇಲಾಖೆಯಿಂದ ಪಾವತಿ (ಸಿ.ಎ. ನಿವೇಶನ ಮಂಜೂರಾತಿ ಕೋರಿ) | ರೂ. | 30,35,250.00 |
| 9 | ಹೆಚ್ಚುವರಿ ಪಾವತಿಸಿದ್ದ ಟಿ.ಡಿ.ಎಸ್. ಹಣ ಮರು ಪಾವತಿ (ಸದಾಶಿವ ರೈ ಗುತ್ತಿಗೆದಾರರಿಗೆ) | ರೂ. | 13,851.00 |
| 10 | ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ<br>ಶ್ರೀ ಡಿ.ಹೆಚ್.ಮೊಯಿದುರವರು ಪಾವತಿಸಿರುವುದು. | ರೂ. | 25,000.00 |
| 11 | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಶುಲ್ಕ ಪಾವತಿಸಿರುವುದು | ರೂ. | 196.00 |
| 12 | ಇತರೆ ಮೂಲಗಳಿಂದ ಬಂದಿರುವ ಶುಲ್ಕ | ರೂ. | 330.00 |
| | **ಒಟ್ಟು ಜಮೆ** | ರೂ. | **48,05,211.00** |

**ಖರ್ಚು**

| | | | |
|---|---|---|---|
| 1 | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | ರೂ. | 2,07,487.00 |
| 2 | ಆಯುಕ್ತರ ಪ್ರಭಾರ ಭತ್ಯೆ | ರೂ. | 2,108.00 |
| 3 | ಸಿಬ್ಬಂದಿ ವೇತನ | ರೂ. | 2,64,868.00 |
| 4 | ಕಂಪ್ಯೂಟರ್ ವೆಬ್‌ಸೈಟ್ ನವೀಕರಣ ಪ್ರೀಮಿಯರ್ ಟೆಕ್ನಾಲಜಿ, ಬೆಂಗಳೂರುರವರಿಗೆ ಪಾವತಿ | ರೂ. | 7,500.00 |
| 5 | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 7,345.00 |
| 6 | ದೂರವಾಣಿ ವೆಚ್ಚ | ರೂ. | 16,197.00 |
| 7 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 2,000.00 |
| 8 | ಸ್ಟೇಶನರಿ ವೆಚ್ಚ | ರೂ. | 9,252.00 |
| 9 | ಸಭಾ ಉಪಹಾರ ವೆಚ್ಚ | ರೂ. | 1,250.00 |
| 10 | ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 5,638.00 |
| 11 | ಮುದ್ರಣ ವೆಚ್ಚ | ರೂ. | 14,280.00 |
| 12 | ರಾಷ್ಟ್ರೀಯ ಹಬ್ಬಕ್ಕೆ ವಂತಿಕೆ ನೀಡಿರುವುದು | ರೂ. | 8,000.00 |
| 13 | ಅಂಚೆ ಚೀಟಿ ಖರೀದಿ | ರೂ. | 3,000.00 |
| 14 | ಕೆ.ಟಿ.ಸಿ.ಪಿ. ಕಾಯ್ದೆ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕದ ಶೇ.5ನ್ನು ನಗರ ಯೋಜನಾ ಮಂಡಳಿಗೆ ಪಾವತಿ | ರೂ. | 92,682.00 |
| 15 | ಬೇರೆ ಖಾತೆಯಿಂದ ಪ್ರಾಧಿಕಾರದ ನಿಧಿಗೆ ಮಾರ್ಚ್ 2017ರಂದು ಜಮೆ ಆಗಿದ್ದ ಟಿ.ಡಿ.ಎಸ್. ಹಣ ವಾಪಾಸು ಆ ಖಾತೆಗೆ ಜಮಾ ಆಗಿರುವುದು | ರೂ. | 42,027.00 |
| 16 | ಗದ್ದಿಗೆ ಉದ್ಯಾನವನದ ಹೆಚ್ಚುವರಿ ಕಾಮಗಾರಿಗಳ ಬಾಬ್ತು ಠೇವಣಿ ಇಟ್ಟಿದ್ದ ಇ.ಎಂ.ಡಿ. ಹಣವನ್ನು ಗುತ್ತಿಗೆದಾರರಾದ ಶ್ರೀ ಸದಾಶಿವ ರೈ ರವರಿಗೆ ಪಾವತಿ | ರೂ. | 66,250.00 |
| 17 | ಕಚೇರಿ ಪೀಠೋಪಕರಣಗಳ ಖರೀದಿ | ರೂ. | 41,000.00 |
| | **ಒಟ್ಟು ವೆಚ್ಚ** | ರೂ. | **7,90,884.00** |

**ಘೋಶ್ವಾರೆ:**

| | | | |
|---|---|---|---|
| 1 | 2017ನೇ ಏಪ್ರಿಲ್ ತಿಂಗಳಿನ ಆರಂಭಿಕ ಶಿಲ್ಕು | ರೂ. | 1,94,21,497.00 |
| 2 | 2017ನೇ ಏಪ್ರಿಲ್ ತಿಂಗಳಿನಿಂದ ಜುಲೈ 2017 ರವರೆಗಿನ ಜಮೆ | ರೂ. | 48,05,211.00 |
| 3 | ಒಟ್ಟು ಜಮೆ | ರೂ. | **2,42,26,708.00** |
| 4 | 2017ನೇ ಏಪ್ರಿಲ್ ತಿಂಗಳಿನಿಂದ ಜುಲೈ 2017 ರವರೆಗಿನ ಖರ್ಚು | ರೂ. | 7,90,884.00 |
| 5 | 2017 ನೇ ಜುಲೈ ತಿಂಗಳ ಆಖೈರು ಶಿಲ್ಕು | ರೂ. | **2,34,35,824.00** |
| 6 | ಠೇವಣಿ ಇಟ್ಟಿರುವುದು | ರೂ. | **1,56,94,461.00** |
| | **ಒಟ್ಟು ಮೊಬಲಗು** | **ರೂ.** | **3,91,30,285.00** |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** ಈ ಮೇಲಿನ ಜಮಾ ಖರ್ಚುಗಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3) ವಿಷಯಸಂಖ್ಯೆ 3:– ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿಧ್ಯಾರ್ಥಿ ನಿಲಯ ನಿರ್ಮಿಸಲು ನಾಗರೀಕ ಸೌಲಭ್ಯದ (ಸಿ.ಎ.) ನಿವೇಶನವನ್ನು ಮಂಜೂರು ಮಾಡುವ ಬಗ್ಗೆ.**

**ಟಿಪ್ಪಣಿ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 74/1 ರಲ್ಲಿನ 2.30 ಎಕರೆ, 74/5 ರಲ್ಲಿನ 2.00ಎಕರೆ, 75/1 ರಲ್ಲಿನ 3.80 ಎಕರೆ, ಮತ್ತು 5/6 ರಲ್ಲಿನ 2.00 ಎಕರೆ ಒಟ್ಟು 10.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುತ್ತದೆ. ಸದರಿ ಬಡಾವಣೆಯಲ್ಲಿನ 1935.11ಚ.ಮೀ ವಿಸ್ತೀರ್ಣದ ನಾಗರೀಕ ಸೌಲಭ್ಯದ (ಸಿ.ಎ.) ನಿವೇಶನವನ್ನು ಭೂ ಮಾಲೀಕರು ಪ್ರಾಧಿಕಾರದ ಹೆಸರಿಗೆ ನೋಂದಾವಣೆ ಮಾಡಿರುತ್ತಾರೆ.ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ಸದರಿ ನಿವೇಶನದಲ್ಲಿ 30ಸೆಂಟ್ ಜಾಗವನ್ನು ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯವನ್ನು ಕಟ್ಟಲು ನಿವೇಶನ ಮಂಜೂರಾತಿ ಮಾಡಿಕೊಡಬೇಕೆಂದು ಕೋರಿದ್ದರು. ಈ ಸಂಬಂಧ ದಿನಾಂಕ :13.03.2017 ರಂದು ನಡೆದ ಸಭೆಯಲ್ಲಿ ಚರ್ಚಿಸಿ 30 ಸೆಂಟ್ ಜಾಗವನ್ನು ಸಮಾಜ ಕಲ್ಯಾಣ ಇಲಾಖೆಗೆ ಮಾರುಕಟ್ಟೆ ದರದ ಶೇ.50ರಷ್ಟನ್ನು ಪಾವತಿಸಿಕೊಂಡು ಮಂಜೂರಾತಿ ಮಾಡಲು ತೀರ್ಮಾನಿಸಲಾಗಿತ್ತು. ಆದರೆ ನಂತರದಲ್ಲಿ 20 ಸೆಂಟ್ ಜಾಗಕ್ಕೆ ದಿನಾಂಕ: 03.07.2017ರಂದು ಚೆಕ್ ಮೂಲಕ ರೂ. 30,35,250/–ನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸದರಿ ಜಾಗಕ್ಕೆ ಸಂಬಧಿಸಿದಂತೆ ಈವರೆವಿಗೂ ಪ್ರಾಧಿಕಾರದ ಹೆಸರಿನಲ್ಲಿ ಖಾತೆಯಾಗಿರುವುದಿಲ್ಲ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಪ್ರಾಧಿಕಾರದಿಂದ ಅನುಮೋದನೆಗೊಂಡ ಬಡಾವಣೆಯಲ್ಲಿನ ಸಿ.ಎ. ನಿವೇಶನವು 47 ಸೆಂಟ್ ಇದ್ದು, ಸದರಿ ಜಾಗದ ಪೈಕಿ 20ಸೆಂಟ್ ಜಾಗವನ್ನು ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಿಸಲು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಇವರು ಮಂಜೂರಾತಿ ಮಾಡಿಕೊಡಲು ಕೋರಿದ್ದು, ಈ ಸಂಬಂಧ ರೂ. 30,35,250/– ಗಳನ್ನು ಚೆಕ್ ಮೂಲಕ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಹಿಂದೆ 30ಸೆಂಟ್ ಜಾವನ್ನು ಮಂಜೂರು ಮಾಡಲು ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ 20ಸೆಂಟ್ ಜಾಗಕ್ಕೆ ಶುಲ್ಕವನ್ನು ಪಾವತಿಸಿರುವುದರಿಂದ ಮತ್ತು ವಲಯನಿಯಮಾವಳಿಗಳಲ್ಲಿ ಸಿ.ಎ.ನಿವೇಶನದ ಉಪಯುಕ್ತ ವಿಸ್ತೀರ್ಣವು ಕನಿಷ್ಟ 0.10ಹೆಕ್ಟೇರ್ ರಷ್ಟು ಇರಬೇಕಾಗಿರುವುದರಿಂದ ಸದರಿ ಜಾಗದಲ್ಲಿ 20ಸೆಂಟ್ ಜಾಗವನ್ನು ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ.

ಸದರಿ ಜಾಗಕ್ಕೆ ಸಂಬಂಧಿಸಿದಂತೆ ಈವರೆವಿಗೂ ಖಾತೆಯು ಪ್ರಾಧಿಕಾರದ ಹೆಸರಿನಲ್ಲಿ ಆಗಿರದ ಕಾರಣ, ಖಾತೆ ಮಾಡಿಸಿಕೊಂಡ ನಂತರ ನಿಯಮಾನುಸಾರ ಸದರಿ ಜಾಗವನ್ನು ಗುತ್ತಿಗೆ ಆಧಾರದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 30ವರ್ಷದವರೆಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಬಹುದಾಗಿದ್ದು, ಈ ಬಗ್ಗೆ ಚರ್ಚಿಸಲು ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಿರ್ಣಯ:–** ನಗರಸಭೆಯಿಂದ ಸಿ.ಎ. ನಿವೇಶನದ ಜಾಗವನ್ನು ಪ್ರಾಧಿಕಾರದ ಹೆಸರಿಗೆ ಖಾತೆ ವರ್ಗಾವಣೆಯಾದ ನಂತರದಲ್ಲಿ ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿರವರಿಗೆ 20ಸೆಂಟ್ ನಿವೇಶನವನ್ನು 30ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೀಡಲು ಕ್ರಮ ಕೈಗೊಳ್ಳಲು ಆಯುಕ್ತರಿಗೆ ಅಧಿಕಾರ ನೀಡಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**4) ವಿಷಯಸಂಖ್ಯೆ 4:–ಮಡಿಕೇರಿ ನಗರಸಭಾ ಕಚೇರಿ ಮುಂಭಾಗದಲ್ಲಿ ಬರುವ ದಿ॥ ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟ್ ಉದ್ಯಾನದವರೆಗೆ ಅಂಕಾರಿಕಾ ವಿದ್ಯುತ್ ಕಂಬಗಳು ಮತ್ತು ಬಲ್ಬ್‌ಗಳನ್ನು ಅಳವಡಿಸುವ ಕುರಿತು.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ: 13.03.2017ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಗಿ, ಮಡಿಕೇರಿ ನಗರಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ರಾಜಸೀಟ್ ಉದ್ಯಾನವನಕ್ಕೆ ಭೇಟಿ ನೀಡುತ್ತಾರೆ. ಸದರಿ ರಾಜಸೀಟ್‌ಗೆ ಹೋಗುವ ರಸ್ತೆಯಲ್ಲಿ ವಾಹನ ದಟ್ಟಣೆಯು ಅಧಿಕವಾಗಿದ್ದು, ಮುನ್ನೆಚ್ಚರಿಗೆ ವಹಿಸುವ ನಿಟ್ಟಿನಲ್ಲಿ ಸದರಿ

ಯೋಜನೆಯನ್ನು ಕೈಗೆತ್ತಿಕೊಂಡು ಅಂದಾಜು ಪಟ್ಟಿ ತಯಾರಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿತ್ತು.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ರೂ.20.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸರ್ಕಾರದ ಮಂಜೂರಾತಿಯನ್ನು ಕೋರಲಾಗಿತ್ತು. ದಿನಾಂಕ:10.11.2017 ರಂದು ಪತ್ರ ಸಂಖ್ಯೆ:ನಅಇ/414/ಮೈಅಪ್ರಾ/2017ರಂದು ಸರ್ಕಾರದ ಕಾರ್ಯದರ್ಶಿಗಳು ರೂ. 25.00 ಲಕ್ಷದವರೆಗಿನ ಎಲ್ಲಾ ಕಾಮಗಾರಿಗಳ ಅಂದಾಜು ಪಟ್ಟಿ/ಎಲ್ಲಾ ಟೆಂಡರ್‌ಗಳನ್ನು ಪ್ರಾಧಿಕಾರದ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪ್ರಾಧಿಕಾರದ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಬಹುದಾಗಿದೆ.

**<u>ನಗರ ಯೋಜನಾ ಸದಸ್ಯರ ಅಭಿಪ್ರಾಯ:–</u>** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈಗಾಗಲೇ ಕಿರಿಯ ಅಭಿಯಂತರರು (ವಿದ್ಯುತ್) ನಗರಸಭೆ, ಇವರಿಂದ ರೂ. 20.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಪಡೆಯಲಾಗಿರುತ್ತದೆ. ಪ್ರಾಧಿಕಾರದ ವತಿಯಿಂದ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಅಲಂಕಾರಿಕಾ ವಿದ್ಯುತ್ ಕಂಬ ಮತ್ತು ಬಲ್ಬ್‌ಗಳನ್ನು ಅಳವಡಿಸಲು E-Procurement ವ್ಯವಸ್ಥೆಗಳು ಇಲ್ಲದ ಕಾರಣದಿಂದಾಗಿ ಸದರಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ಅಥವಾ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ವಹಿಸಿಕೊಡಬಹುದಾಗಿದ್ದು, ನಿಯಮಾನುಸಾರ ಕಾಮಗಾರಿ ಮುಗಿದ ನಂತರ ಹಣ ಉಪಯೋಗ ಪ್ರಮಾಣ ಪತ್ರ (ಯು.ಸಿ.) ಪಡೆಯಬೇಕಾಗಿರುತ್ತದೆ. ಈ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಸದರಿ ಪ್ರಸ್ತಾವನೆಯನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**<u>ನಿರ್ಣಯ:–</u>** ಸಭೆಯಲ್ಲಿ ಪ್ರಸ್ತಾವನೆ ಬಗ್ಗೆ ಚರ್ಚಿಸಿ, ಸದರಿ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರ ಅಥವಾ ನಗರಸಭೆ ಮುಖಾಂತರ E-Procurement ಟೆಂಡರ್ ಕರೆದು ತುರ್ತಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>5) ವಿಷಯಸಂಖ್ಯೆ 5:–</u>ಮಡಿಕೇರಿ ನಗರಸಭಾ ವ್ಯಾಪ್ತಿಯ ಕನ್ನಂಡ ಬಾಣೆ ಕೆರೆಗೆ ಬರುವ ಕಲುಷಿತ ನೀರನ್ನು ತಡೆಗಟ್ಟುವ ಸಲುವಾಗಿ ಯು.ಜಿ.ಡಿ. ಮೂಲಕ ಪೈಪ್ ಲೈನ್‌ಗಳನ್ನು ಅಳವಡಿಸಲು ಅಂದಾಜು 10.00ಲಕ್ಷ ಹಣವನ್ನು ಪ್ರಾಧಿಕಾರದ ವತಿಯಿಂದ ನಗರಸಭೆಗೆ ಹಸ್ತಾಂತರಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿರುವ ಬಗ್ಗೆ.**

**<u>ಟಿಪ್ಪಣಿ:–</u>** ಸರ್ಕಾರದ ಪತ್ರ ಸಂಖ್ಯೆ: ನಅಇ/08/ಮೈಅಪ್ರಾ/2016, ದಿನಾಂಕ:06.05.2017ರ ಸರ್ಕಾರದ ಪತ್ರದಲ್ಲಿ ಮಡಿಕೇರಿ ನಗರಸಭಾ ವ್ಯಾಪ್ತಿಯ ಕನ್ನಂಡ ಬಾಣೆ ಕೆರೆಗೆ ಬರುವ ಕಲುಷಿತ ನೀರನ್ನು ತಡೆಗಟ್ಟುವ ಸಲುವಾಗಿ ಪ್ರಾಧಿಕಾರವು ಪಾವತಿಸಿಕೊಳ್ಳುತ್ತಿರುವ ಕೆರೆ ಅಭಿವೃದ್ಧಿ ಶುಲ್ಕದಿಂದ ಅಂದಾಜು ರೂ. 10.00ಲಕ್ಷ ಹಣವನ್ನು ಕನ್ನಂಡ ಬಾಣೆ ಕೆರೆ ಅಭಿವೃದ್ಧಿ ಸಂಬಂಧ ನಗರಸಭೆಗೆ ಹಸ್ತಾಂತರಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ನಗರಸಭೆ, ಮಡಿಕೇರಿ ಸದರಿ ಕನ್ನಂಡ ಬಾಣೆ ಕೆರೆಗೆ ಬರುವ ಕಲುಷಿತ ನೀರನ್ನು ತಡೆಗಟ್ಟುವ ಸಲುವಾಗಿ ಯು.ಜಿ.ಡಿ. ಮೂಲಕ ಪೈಪ್ ಲೈನ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಲ್ಲಿ ಪ್ರಾಧಿಕಾರದ ವತಿಯಿಂದ ರೂ. 10.00ಲಕ್ಷ ಹಣವನ್ನು ನಗರಸಭೆಗೆ ಹಸ್ತಾಂತರಿಸಲು ಪ್ರಸ್ತಾವನೆಯನ್ನು ಮತ್ತೊಮ್ಮೆ ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**<u>ನಿರ್ಣಯ:–</u>** ಕನ್ನಂಡ ಬಾಣೆ ಕೆರೆಗೆ ಬರುವ ಕಲುಷಿತ ನೀರನ್ನು ತಡೆಗಟ್ಟುವ ಸಲುವಾಗಿ ಯು.ಜಿ.ಡಿ. ಮೂಲಕ ಪೈಪ್ ಲೈನ್‌ಗಳನ್ನು ಅಳವಡಿಸುವ ಕಾಮಗಾರಿಗಳನ್ನು ನಗರಸಭೆಯಿಂದ ಕೈಗೆತ್ತಿಕೊಂಡಲ್ಲಿ ಸರ್ಕಾರವು ನೀಡಿರುವ ಆಡಳಿತಾತ್ಮಕ ಅನುಮೋದನೆಯಂತೆ ರೂ. 10.00ಲಕ್ಷ ಹಣವನ್ನು ನಗರಸಭೆಗೆ ಹಸ್ತಾಂತರಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>6) ವಿಷಯಸಂಖ್ಯೆ 6:-</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ. 81/8 ರಲ್ಲಿನ 1.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ಮತ್ತು ಕಾಟೇಜ್ ನಿರ್ಮಿಸುವ) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಡಿ.ಕೆ. ಮಂಜುನಾಥ್ ಮತ್ತು ಶ್ರೀ ಡಿ.ಕೆ. ಗುರುರಾಜ್ ಬಿನ್॥ ಡಿ.ಎಸ್. ಕೋದಂಡ ರಾಮ, 4ನೇ ವಾರ್ಡ್, 2ನೇ ಬ್ಲಾಕ್, ಕುಶಾಲನಗರ, ಸೊಮವಾರಪೇಟೆ ತಾಲ್ಲೂಕು ರವರು ಕೋರಿರುತ್ತಾರೆ.**

**<u>ಟಿಪ್ಪಣಿ :-</u>** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ-1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 4.70 ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ (ಹೋಟೆಲ್ ಮತ್ತು ಕಾಟೇಜ್) ಭೂ-ಉಪಯೋಗ ಬದಲಾವಣೆ ಮಾಡುವುದರಿಂದ ಸುತ್ತಮುತ್ತಲಿನ ಜನರಿಗೆ ಉದ್ಯೋಗ ಸೃಷ್ಠಿಸುವುದರ ಜೊತೆಗೆ ಪ್ರವಾಸೋದ್ಯಮ ದೃಷ್ಠಿಯಿಂದ ಉಪಯೋಗವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೋಟೆಲ್ ಮತ್ತು ಕಾಟೇಜ್) ಭೂ-ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 01-07-2017 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**<u>ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:-</u>** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ-1)2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 4.70ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ ಜಂನಿ/ಕೊಡಗು/ಗುಪ್ರಘೋ/01/2013-14 ದಿನಾಂಕ 16-01-2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಸದರಿ ಜಮೀನಿಗೆ 4.70ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದರಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**<u>ನಿರ್ಣಯ:-</u>** ಇಂದಿನ ಸಭೆಯ ಪ್ರಾರಂಭದಲ್ಲಿ ಚರ್ಚಿಸಿರುವಂತೆ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರ ವಲಯನಿಯಮಾವಳಿಗಳಲ್ಲಿ ವಾಣಿಜ್ಯ ಉದ್ದೇಶಕ್ಕೆ ಕನಿಷ್ಟ 6.00ಮೀ ಅಗಲದ ಸಂಪರ್ಕ ರಸ್ತೆ ಮತ್ತು ಇನ್ನಿತರ ಅತ್ಯಾವಶ್ಯಕವಾಗಿರುವ ಬದಲಾವಣೆಗಳನ್ನು ಅಳವಡಿಸಿಕೊಂಡು ತಿದ್ದುಪಡಿ ಬೈಲಾವನ್ನು ರಚಿಸಿ ಸರ್ಕಾರದಿಂದ ಅನುಮೋದನೆ ಪಡೆದುಕೊಂಡ ನಂತರದಲ್ಲಿ ಪರಿಶೀಲಿಸಿ, ಮುಂದಿನ ಸಭೆಯಲ್ಲಿ ಮಂಡಿಸಿ ಕ್ರಮ ಕೈಗೊಳ್ಳಬಹುದೆಂದು ಹಾಗೂ ಪ್ರಸ್ತಾವಿತ ಜಮೀನಿಗೆ 4.70ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದರಿಂದ ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಪ್ರಸ್ತಾವನೆಯನ್ನು ಈ ಹಂತದಲ್ಲಿ ತಿರಸ್ಕರಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>7)ವಿಷಯಸಂಖ್ಯೆ 7:-</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 294/50 ರಲ್ಲಿನ 0.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಂ ಸ್ಟೇ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಡಾ॥ ಶ್ರೀಮತಿ ನಿರ್ಮಲ ಸೋಮಯ್ಯ, ಕನ್ನಂಡ ಬೀರಪ್ಪ ದೇವಸ್ಥಾನ ಹತ್ತಿರ, ಕನ್ನಂಡ ಬಾಣೆ, ಮಡಿಕೇರಿ ತಾಲ್ಲೂಕು ಇವರು ಕೋರಿರುತ್ತಾರೆ.**

**ಟಿಪ್ಪಣಿ :–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 4.0 ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ–ಉಪಯೋಗ ಬದಲಾವಣೆ ಮಾಡಿ ಹೋಂ ಸ್ಟೇ ನಿರ್ಮಾಣ ಮಾಡುವುದರಿಂದ 1). ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಆಗುವುದು. 2). ಮಡಿಕೇರಿ ನಗರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದು, ಇತರೆ ಲಾಡ್ಜ್‌ಗಳಲ್ಲಿ ದೊರೆಯದಿರುವ ಸವಲತ್ತುಗಳು ಹೋಂ ಸ್ಟೇಯಲ್ಲಿ ದೊರೆಯುವುದು. 3). ಕೊಡಗು ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು ಎಂಬ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಂ ಸ್ಟೇ ನಿರ್ಮಾಣ) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 06–06–2017 & 08–06–2017 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪೂರ್ವದಲ್ಲಿ ಹಾಲಿ 4.0ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಕಂಡುಬಂದಿರುವುದಿಲ್ಲ. ಸದರಿ ಜಮೀನಿಗೆ 4.0ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದರಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**<u>ನಿರ್ಣಯ:–</u>** ವಿಷಯ ಸಂಖ್ಯೆ 6 ರ ನಿರ್ಣಯದಂತೆ ಬೈಲಾ ತಿದ್ದುಪಡಿಯಾಗಿ ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರದಲ್ಲಿ ಅವಕಾಶವಿದ್ದಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಲು ಮುಂದಿನ ಸಭೆಯಲ್ಲಿ ಮಂಡಿಸುವಂತೆಯೂ ಹಾಲಿ ಸದರಿ ಜಮೀನಿಗೆ 4.00ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದರಿಂದ ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಪ್ರಸ್ತಾವನೆಯನ್ನು ಈ ಹಂತದಲ್ಲಿ ತಿರಸ್ಕರಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>8) ವಿಷಯಸಂಖ್ಯೆ 8:–</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 244/29 ರಲ್ಲಿನ 0.60 ಎಕರೆ ಮತ್ತು 244/33 ರಲ್ಲಿನ 0.30 ಎಕರೆ ಒಟ್ಟು 0.90 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀಮತಿ ಸ್ವಾತಿ ಟಿ., # 36, ಡಿ ಬ್ಲಾಕ್, ಸಾಯಿ ಕುಟೀರ, ನಿವೇದಿತ ನಗರದ ಹತ್ತಿರ, ಬೋಗಾದಿ ರಿಂಗ್ ರಸ್ತೆ, ಆನಂದ ನಗರ, ಮೈಸೂರು ರವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ವಸತಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 4.00ಮೀ ಅಗಲದ ಕಿರಿದಾದ ರಸ್ತೆಯಿಂದ

ಸಂಪರ್ಕವಿರುತ್ತದೆ. ಸದರಿ ಜಮೀನಿನಲ್ಲಿ ಮಂಗಳೂರು ಹೆಂಚಿನ ಮೇಲ್ಛಾವಣಿಯನ್ನು ಹೊಂದಿರುವ ಹಳೆಯ ವಸತಿ ಕಟ್ಟಡವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ–ಉಪಯೋಗ ಬದಲಾವಣೆ ಮಾಡಿ ರೆಸಾರ್ಟ ನಿರ್ಮಾಣ ಮಾಡುವುದರಿಂದ ಕೊಡಗು ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆ, ಸುಂದರ ಹಸಿರು ಪರಿಸರದ ವ್ಯವಸ್ಥೆ ಮಾಡಿಕೊಡುವ ಮತ್ತು ಸ್ಥಳಿಯರಿಗೆ ಉದ್ಯೋಗ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ ನಿರ್ಮಾಣ) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 14–07–2017 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ವಸತಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 4.0 ಮೀ ಅಗಲದ ಗ್ರಾಮ ಪಂಚಾಯಿತಿರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನಿಗೆ 4.0 ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದೂ ಅಲ್ಲದೆ ರಸ್ತೆಯು ಕಡಿದಾದ ಪ್ರದೇಶದಲ್ಲಿದ್ದು ವಾಹನಗಳ ಚಲಾವಣೆ ಕಷ್ಟಸಾಧ್ಯವಾಗಿರುತ್ತದೆ. ಆದ ಕಾರಣ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**ನಿರ್ಣಯ:–** ವಿಷಯ ಸಂಖ್ಯೆ 6 ರ ನಿರ್ಣಯದಂತೆ ಬೈಲಾ ತಿದ್ದುಪಡಿಯಾಗಿ ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರದಲ್ಲಿ ಅವಕಾಶವಿದ್ದಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಲು ಮುಂದಿನ ಸಭೆಯಲ್ಲಿ ಮಂಡಿಸುವಂತೆಯೂ ಹಾಲಿ ಸದರಿ ಜಮೀನಿಗೆ 4.00ಮೀ ಅಗಲದ ರಸ್ತೆಯಿಂದ ಸಂಪರ್ಕವಿದ್ದು, ರಸ್ತೆಯು ಕಡಿದಾದ ಪ್ರದೇಶವಾಗಿದ್ದು, ವಾಹನಗಳ ಚಲಾವಣೆಗೆ ಕಷ್ಟಸಾಧ್ಯವಾಗಿರುವುದರಿಂದ ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಪ್ರಸ್ತಾವನೆಯನ್ನು ಈ ಹಂತದಲ್ಲಿ ತಿರಸ್ಕರಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**9)ವಿಷಯಸಂಖ್ಯೆ 9:–** **ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 192/46 ರಲ್ಲಿನ 0.30ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಪಿ.ಡಿ. ಪೊನ್ನಪ್ಪ ಬಿನ್॥ಪೌ॥ ದೇವಯ್ಯ, ಪಿ.ಸಿ.ನಿಲಯ, ಮಂಗಳೂರು ರಸ್ತೆ, ಮಡಿಕೇರಿ ರವರು ಕೋರಿರುತ್ತಾರೆ.**

**ಟಿಪ್ಪಣಿ :–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 6.0 ಮೀ ಅಗಲದ ರಸ್ತೆಯಿಂದ, ದಕ್ಷಿಣದಲ್ಲಿ ಹಾಲಿ 6.0 ಮೀ ಅಗಲದ ರಸ್ತೆಯಿಂದ ಹಾಗೂ ಪೂರ್ವದಲ್ಲಿ ಹಾಲಿ 5.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ–ಉಪಯೋಗ ಬದಲಾವಣೆ ಮಾಡಿ ಹೋಟೆಲ್ ನಿರ್ಮಾಣ ಮಾಡುವುದರಿಂದ ಸ್ಥಳಿಯರಿಗೆ ಉದ್ಯೋಗ ಕಲ್ಪಿಸುವ ಮತ್ತು ಕೊಡಗು ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ವಸತಿ ಹಾಗೂ

ಊಟೋಪಚಾರದ ವ್ಯವಸ್ಥೆಯನ್ನು ಸರಾಗವಾಗಿ ಮಾಡಿಕೊಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಟೆಲ್ ನಿರ್ಮಾಣ) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 15–07–2017 ರಂದು ವಿಜಯ ಕರ್ನಾಟಕ ಮತ್ತು ಪ್ರಜಾಸತ್ಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 4.0ಮೀ ಅಗಲದ ರಸ್ತೆಯಿಂದ, ದಕ್ಷಿಣದಲ್ಲಿ ಹಾಲಿ 6.0 ಮೀ ಅಗಲದ ರಸ್ತೆಯಿಂದ ಹಾಗೂ ಪೂರ್ವದಲ್ಲಿ ಹಾಲಿ 5.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಸದರಿ ಜಮೀನಿಗೆ 6.0 ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಆದಕಾರಣ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**ನಿರ್ಣಯ:–** ವಿಷಯ ಸಂಖ್ಯೆ 6 ರ ನಿರ್ಣಯದಂತೆ ಬೈಲಾ ತಿದ್ದುಪಡಿಯಾಗಿ ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರದಲ್ಲಿ ಪ್ರಸ್ತಾವಿತ ಜಮೀನಿಗೆ 6.00ಮೀ ಅಗಲದ ರಸ್ತೆಯಿಂದ ಸಂಪರ್ಕವಿರುವುದನ್ನು ಪರಿಗಣಿಸಿ, ಅವಕಾಶವಿದ್ದಲ್ಲಿ ಪ್ರಸ್ತಾವನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**10)ವಿಷಯಸಂಖ್ಯೆ 10:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 180/78 ರಲ್ಲಿನ 0.10 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೊಟೇಲ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಕೃಷ್ಣ ಕುಮಾರ್ ನಾಯರ್, ಮುಂಬಯಿ ವಿಕ್ರೋಲ್ ವೆಸ್ಟ್‌ಸ್ಟೇಷನ್ ರಸ್ತೆ, ಕಾಯ್ಸ್ ಬಿಲ್ಡಿಂಗ್, ನಂ–ಎ 15, ಮುಂಬಯಿ ರವರು ಕೋರಿರುತ್ತಾರೆ.**

**ಟಿಪ್ಪಣಿ :–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಉತ್ತರದಲ್ಲಿ ಹಾಲಿ 24.50 ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–275 ರಿಂದ ಹಾಗೂ ಪೂರ್ವದಲ್ಲಿ ಹಾಲಿ 4.50 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ–ಉಪಯೋಗ ಬದಲಾವಣೆ ಮಾಡಿ ಹೋಟೆಲ್ ನಿರ್ಮಾಣ ಮಾಡುವುದರಿಂದ ಸ್ಥಳಿಯರಿಗೆ ಉದ್ಯೋಗ ಕಲ್ಪಿಸುವ ಮತ್ತು ಕೊಡಗು ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಸರಾಗವಾಗಿ ಮಾಡಿಕೊಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಟೆಲ್ ನಿರ್ಮಾಣ) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ

ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 15–07–2017 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಉತ್ತರದಲ್ಲಿ ಹಾಲಿ 24.50 ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–275 ರಿಂದ ಹಾಗೂ ಪೂರ್ವದಲ್ಲಿ ಹಾಲಿ 4.50ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನಿಗೆ 24.50 ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಾಗದ ಸುತ್ತಮುತ್ತ ಯಾವುದೇ ವಾಣಿಜ್ಯ ಬೆಳವಣಿಗೆಗಳು ಕಂಡು ಬಂದಿರುವುದಿಲ್ಲ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ವಲಯ ನಿಯಮಾವಳಿಗಳನ್ವಯ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಪ್ರಸ್ತುತ ನಿವೇಶನಕ್ಕೆ 24.50ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–275 ರಿಂದ ನೇರ ಸಂಪರ್ಕ ಹೊಂದಿರುವುದನ್ನು ಪರಿಗಣಿಸಿ, ಜಮೀನಿನ ಸುತ್ತಮುತ್ತ ಅನೇಕ ವಸತಿ ಬೆಳವಣಿಗೆಗಳು ಬಂದಿರುವುದರಿಂದ ಪ್ರಸ್ತಾವನೆಯನ್ನು ಕೃಷಿ ಉಪಯೋಗದಿಂದ ವಾಣಿಜ್ಯ ಉದ್ದೇಶದ ಹೋಟೇಲ್ ಕಟ್ಟಡವನ್ನು ನಿರ್ಮಿಸಲು ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಭೆಯು ಬಹುಮತದ ಅಂಗೀಕಾರ ನೀಡಿತು.

**11)ವಿಷಯಸಂಖ್ಯೆ 11:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 180/4 ರಲ್ಲಿನ 1.00 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಟೇಲ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಕೆ.ಎಸ್.ಅಪ್ಪಯ್ಯ, ಬಿನ್॥ಪೌ॥ ಕೆ.ಎಂ.ಸುಬ್ಬಯ್ಯ, ಕಾಟಕೇರಿ ಗ್ರಾಮ, ಮಡಿಕೇರಿ ತಾಲ್ಲೂಕು, ಮಡಿಕೇರಿ ರವರು ಕೋರಿರುತ್ತಾರೆ.**

**ಟಿಪ್ಪಣಿ :–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಉತ್ತರದಲ್ಲಿ ಹಾಲಿ 24.50 ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–275 ರಿಂದ ಹಾಗೂ ಪೂರ್ವದಲ್ಲಿ ಹಾಲಿ 6.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ–ಉಪಯೋಗ ಬದಲಾವಣೆ ಮಾಡಿ ಹೋಟೆಲ್ ನಿರ್ಮಾಣ ಮಾಡುವುದರಿಂದ ಸ್ಥಳಿಯರಿಗೆ ಉದ್ಯೋಗ ಕಲ್ಪಿಸುವ ಮತ್ತು ಕೊಡಗು ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಸರಾಗವಾಗಿ ಮಾಡಿಕೊಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಹೋಟೇಲ್ ನಿರ್ಮಾಣ) ಭೂ–ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 15–07–2017 ರಂದು ವಿಜಯ ಕರ್ನಾಟಕ ಮತ್ತು ಶಕ್ತಿ

ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಉತ್ತರದಲ್ಲಿ ಹಾಲಿ 24.50 ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–275 ರಿಂದ ಹಾಗೂ ಪೂರ್ವದಲ್ಲಿ ಹಾಲಿ 6.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನಿಗೆ 24.50 ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಾಗದ ಸುತ್ತಮುತ್ತ ಯಾವುದೇ ವಾಣಿಜ್ಯ ಬೆಳವಣಿಗೆಗಳು ಕಂಡು ಬಂದಿರುವುದಿಲ್ಲ. ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ ವಲಯ ನಿಯಮಾವಳಿಗಳನ್ವಯ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅನುಮತಿ ನೀಡಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಯಲ್ಲಿ ಮಂಡಿಸಿದೆ.

**<u>ನಿರ್ಣಯ:–</u>** ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಪ್ರಸ್ತುತ ನಿವೇಶನಕ್ಕೆ 24.50ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–275 ರಿಂದ ನೇರ ಸಂಪರ್ಕ ಹೊಂದಿರುವುದನ್ನು ಪರಿಗಣಿಸಿ, ಜಮೀನಿನ ಸುತ್ತಮುತ್ತ ಅನೇಕ ವಸತಿ ಬೆಳವಣಿಗೆಗಳು ಬಂದಿರುವುದರಿಂದ ಪ್ರಸ್ತಾವನೆಯನ್ನು ಕೃಷಿ ಉಪಯೋಗದಿಂದ ವಾಣಿಜ್ಯ ಉದ್ದೇಶದ ಹೊಟೇಲ್ ಕಟ್ಟಡವನ್ನು ನಿರ್ಮಿಸಲು ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಭೆಯು ಬಹುಮತದ ಅಂಗೀಕಾರ ನೀಡಿತು.

**<u>12)ವಿಷಯಸಂಖ್ಯೆ 12:–</u> ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 10/44 ರಲ್ಲಿನ 3.00ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ವಿಹಾರ ಧಾಮ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಎಸ್.ಪರಮಶಿವ ಮತ್ತು ಪಿ.ಶೀಲಾ ಕೋಂ॥ಪರಮಶಿವ, ಮಗ್ಗುಲ ಗ್ರಾಮ, ವಿರಾಜಪೇಟೆ ತಾಲ್ಲೂಕು ಇವರು ಕೋರಿರುತ್ತಾರೆ.**

**ಟಿಪ್ಪಣಿ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 5.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸದರಿ ಜಮೀನು ಮಡಿಕೇರಿ ಕೇಂದ್ರ ಕಾರಾಗೃಹಕ್ಕೆ ಅತ್ಯಂತ ಸಮೀಪದಲ್ಲಿರುವುದು ಕಂಡು ಬಂದಿರುತ್ತದೆ ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ವಿಹಾರ ಧಾಮ ನಿರ್ಮಾಣ ಮಾಡುವುದರಿಂದ 1)ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಲಭಿಸುವ 2)ಪ್ರವಾಸಿಗರಿಗೆ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡುವ 3)ಬಂಡವಾಳ ಹೂಡಿಕೆಯಿಂದ ಕ್ಷೇತ್ರದ ಅಭಿವೃದ್ಧಿಗೊಳಿಸುವ, 4)ಜಿಲ್ಲೆಗೆ ಬಂಡವಾಳ ಹರಿದು ಬರುವ ಸಾರ್ವಜನಿಕ ಹಿತಾಸಕ್ತಿ ಹೊಂದಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ವಿಹಾರ ಧಾಮ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ದಿನಾಂಕ 05.08.2017 ರಂದು ಹೊಸ ದಿಗಂತ ಮತ್ತು ದಿನಾಂಕ:17.08.2017ರಂದು ಕಾವೇರಿ ಟೈಮ್ಸ್ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ.

**ಆಯುಕ್ತರು/ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ (ಪರಿಷ್ಕೃತ–1) 2021 ರನ್ವಯ ಕೃಷಿ ವಲಯದಲ್ಲಿ ಇರುತ್ತದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ ಹಾಲಿ 5.0 ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ ನಗ್ರಾಯೋನಿ/ಜಂನಿ/ಕೊಡಗು/ ಗುಪ್ರಘೋ/01/2013–14 ದಿನಾಂಕ 16–01–2014 ರನ್ವಯ ವಾಣಿಜ್ಯ ಉಪಯೋಗಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಠ 12.00 ಮೀ ಇರಬೇಕಾಗಿರುತ್ತದೆ. ಸದರಿ ಜಮೀನು ಮಡಿಕೇರಿ ಕೇಂದ್ರ ಕಾರಾಗೃಹದ ಅಂಚಿನಿಂದ ಕೇವಲ 10–15ಮೀ ಅಂತರದಲ್ಲಿರುವ ಕಾರಣ ಸದರಿ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವುದು ಸೂಕ್ತವಾಗಿರುವುದಿಲ್ಲ. ಅಲ್ಲದೆ ಈ ಪರಿಮಿತಿಯಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಅನುಮೋದಿಸುವ ಮುನ್ನ ಕಾರಾಗೃಹ/ಪೋಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಸೂಕ್ತವೆಂದು ನ.ಯೋ.ಸದಸ್ಯರು ಅಭಿಪ್ರಾಯ ಪಡಲಾಗಿದೆ. ಸದರಿ ಜಮೀನು ನಗರ ಯೋಜನೆಯ ಕಾರ್ಯಕ್ಷೇತ್ರದ ಎಲ್ಲೆಯಿಂದ (Connurbation) ದೂರವಿದ್ದು ಜಮೀನಿನ ಸಮೀಪದಲ್ಲಿ ವಾಣಿಜ್ಯ ಬೆಳವಣಿಗೆಗಳು ಇರುವುದಿಲ್ಲ. ಸದರಿ ಜಮೀನಿಗೆ 5.0ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ ಆದಕಾರಣ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಾಗಿರುವುದಿಲ್ಲ. ಪ್ರಾಧಿಕಾರದ ಸಭೆಗೆ ಸೂಕ್ತ ನಿರ್ಣಯಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನು ಮಡಿಕೇರಿ ಕೇಂದ್ರ ಕಾರಾಗೃಹದ ಹತ್ತಿರ ಬರುತ್ತಿರುವುದರಿಂದ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಕಾರಾಗೃಹ/ಪೋಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ವಿಷಯ ಸಂಖ್ಯೆ 6 ರ ನಿರ್ಣಯದಂತೆ ಬೈಲಾ ತಿದ್ದುಪಡಿಯಾಗಿ ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರದಲ್ಲಿ ಅವಕಾಶವಿದ್ದಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಲು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸಭೆಯು ಸರ್ವಾನುಮತದ ತೀರ್ಮಾನಿಸಿತು.

**13)ವಿಷಯಸಂಖ್ಯೆ 13:–ಶ್ರೀ ಸಿ.ಬಾಲಸುಬ್ರಮಣ್ಯ ಮತ್ತು ಶ್ರೀಮತಿ ಚೈತ್ರ ಬಿ.ಬಾಲಸುಬ್ರಮಣ್ಯ, ದೃಷ್ಟಿ ಗಣಪತಿ ದೇವಾಲಯದ ಹತ್ತಿರ, ಕನ್ನಂಡಬಾಣೆ, ಮಡಿಕೇರಿರವರು ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 137 ರಲ್ಲಿ 0.24 ಎಕರೆ 138 ರಲ್ಲಿ 0.40 ಎಕರೆ ಒಟ್ಟು 0.64 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

**ಟಿಪ್ಪಣಿ:–** ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು ಹಾಗೂ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ಉಪಯೋಗದಲ್ಲಿ ಬರುತ್ತಿದ್ದು, ಪ್ರಸ್ತಾವಿತ ಜಾಗಕ್ಕೆ ದಕ್ಷಿಣದಲ್ಲಿ 5.00ಮೀ ಹಾಗೂ ಉತ್ತರದಲ್ಲಿ 5.20ಮೀ ಅಗಲದ ಸಾರ್ವಜನಿಕ ರಸ್ತೆಗಳಿಂದ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಕಂಡುಬಂದಿರುತ್ತದೆ.

ಆದರೆ ವಲಯನಿಯಾಮಾವಳಿಗಳನ್ವಯ ವಸತಿ ಉದ್ದೇಶಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಟ 6.00ಮೀ ಇರಬೇಕಾಗಿರುತ್ತದೆ. ಆದ್ದರಿಂದ ಸದರಿ ಪ್ರಸ್ತಾವನೆಗೆ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ನೀಡುವುದು ಸೂಕ್ತವಾಗಿರುವುದಿಲ್ಲ. ಈ ಬಗ್ಗೆ ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನಿಗೆ ವಲಯನಿಯಮಾವಳಿಗಳನ್ವಯ ವಸತಿ ಉದ್ದೇಶಕ್ಕೆ ಉಪಗಮನ ರಸ್ತೆಯ ಅಗಲವು ಕನಿಷ್ಟ 6.00ಮೀ ಇರುವುದಿಲ್ಲವಾದರಿಂದ ಆಯುಕ್ತರು/ನಗರಯೋಜನಾ ಸದಸ್ಯರ ಅಭಿಪ್ರಾಯದಂತೆ ತಾಂತ್ರಿಕ ಅಭಿಪ್ರಾಯ ನೀಡುವುದು ಸೂಕ್ತವಾಗಿರುವುದಿಲ್ಲವೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**14)ವಿಷಯ ಸಂಖ್ಯೆ 14:– ಶ್ರೀ ಎಂ.ಎಸ್.ಜಲೇಂದ್ರ, ಶ್ರೀ ಎಂ.ಎಸ್.ಪ್ರಸನ್ನ ಮತ್ತು ಶ್ರೀ ಎಂ.ಎಸ್.ಪ್ರತಾಪ್, C/o ನಂಬರ್ ಬಿ1, 112/3, ಗೋಕುಲ ಅಪಾರ್ಟ್‌ಮೆಂಟ್, ಬೆಂಗಳೂರು ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 193 ರಲ್ಲಿನ 4.95 ಎಕರೆ, 195/2 ರಲ್ಲಿನ 2.53 ಎಕರೆ, 196/2 ರಲ್ಲಿನ 20.00 ಎಕರೆ, 224/1 ರಲ್ಲಿನ 0.26 ಎಕರೆ ಮತ್ತು 284 ರಲ್ಲಿನ 1.16 ಎಕರೆ ಒಟ್ಟು 28.90 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.**

**ಟಿಪ್ಪಣಿ :–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ದಿನಾಂಕ 19–05–2017 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆನ್ನುವ ನಿರ್ಣಯದನ್ವಯ ದಿನಾಂಕ 05–06–2017 ರಂದು ಸದರಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಪ್ರಸ್ತಾವನೆಯಲ್ಲಿ ಸರ್ವೆ ನಂ. 224 ಎಂದು ತಪ್ಪಾಗಿ ಪ್ರಕಟಣೆಗೊಂಡಿದ್ದು, ಇದನ್ನು ತಿದ್ದುಪಡಿ ಮಾಡಿ ಸರ್ವೆ ನಂ. 224/1 ರಲ್ಲಿನ 0.26 ಎಕರೆ ಎಂದು ಓದಿಕೊಳ್ಳತಕ್ಕದೆಂದು ದಿನಾಂಕ 19–07–2017 ರಂದು ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ ವಿಜಯ ಕರ್ನಾಟಕ ಮತ್ತು ಶಕ್ತಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿಗದಿತ ಕಾಲಾವಧಿಯ ಒಳಗೆ ಶ್ರೀಮತಿ ನಾಗವೇಣಿ , ಆರ್,ಟಿ,ಐ ಕಾರ್ಯಕರ್ತೆ, ಕಾವೇರಿ ಲೇಜಾಟ್, ಮಡಿಕೇರಿ ಇವರು ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಜಮೀನು ಎಕೊ ಸೆನ್ಸಿಟಿವ್ ಝೋನ್ ನಲ್ಲಿ ಬರುವುದರಿಂದ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ನ್ಯಾಯಯುತವಾದ ಬೆಲೆಯಲ್ಲಿ ಭೂ ಮಾಲೀಕರು ನಿವೇಶನ ಹಂಚುವುದು ಯಾವ ಗ್ಯಾರಂಟಿ ಎಂದು ನಮೂದಿಸಿ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಭೂ–ಪರಿವರ್ತನೆ ಮಾಡಬಾರದೆಂದು ಆಕ್ಷೇಪಣೆ ಮಾಡಿರುತ್ತಾರೆ ಆದರೆ ಭೂ–ಉಪಯೋಗ ಬದಲಾವಣೆ ಬಗ್ಗೆ ಯಾವುದೇ ಪ್ರಸ್ತಾವನೆಯನ್ನು ಮಾಡಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :– 1)** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಶ್ರೀಮತಿ ನಾಗವೇಣಿ , ಆರ್,ಟಿ,ಐ ಕಾರ್ಯಕರ್ತೆ, ಕಾವೇರಿ ಲೇಜಾಟ್, ಮಡಿಕೇರಿ ಇವರು ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಜಮೀನು ಎಕೊ ಸೆನ್ಸಿಟಿವ್ ಝೋನ್ ನಲ್ಲಿ ಬರುವುದರಿಂದ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ನ್ಯಾಯಯುತವಾದ ಬೆಲೆಯಲ್ಲಿ ಭೂ ಮಾಲೀಕರು ನಿವೇಶನ ಹಂಚುವುದು ಯಾವ ಗ್ಯಾರಂಟಿ ಎಂದು ನಮೂದಿಸಿರುತ್ತಾರೆ. ಸದರಿ ಜಮೀನು ಎಕೊ ಸೆನ್ಸಿಟಿವ್ ಝೋನ್ ನಲ್ಲಿ ಬರುತ್ತದೆಯೇ ಎಂಬುವುದರ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ.

2) ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ವಸತಿ ಕಲ್ಪಿಸಲು ಅರ್ಜಿದಾರರು ಅರ್ಜಿ ಸಲ್ಲಿಸಿರುವುದರಿಂದ ಈ ಜಮೀನಿನಲ್ಲಿ ನಿಯಾಮಾನುಸಾರ ವಿನ್ಯಾಸ ನಕ್ಷೆಯನ್ನು ತಯಾರಿಸಿ ಪ್ರಾಧಿಕಾರಕ್ಕೆ ಸಲ್ಲಿಸಲು ತಿಳಿಸಬಹುದು. ವಿನ್ಯಾಸದ ಪ್ರಸ್ತಾವನೆಯೊಂದಿಗೆ ಸರ್ಕಾರಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಬಹುದು.

ಈ ಮೇಲಿನ ಎರಡು ಅಂಶಗಳನ್ನು ಪರಿಶೀಲಿಸಿ ಸದರಿ ಪ್ರಸ್ತಾವನೆಯನ್ನು ಸದ್ಯಕ್ಕೆ ಮುಂದೂಡಬಹುದಾಗಿದ್ದು, ಚರ್ಚೆ ಮತ್ತು ಸೂಕ್ತ ನಿರ್ಣಯಕ್ಕೆ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**<u>ನಿರ್ಣಯ:–</u>** ಪ್ರಸ್ತಾವಿತ ಜಮೀನು ಎಕೊ ಸೆನ್ಸಿಟಿವ್ ಝೋನ್ ನಲ್ಲಿ ಬರುತಿಲ್ಲವಾದ ಕಾರಣ ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**15)ವಿಷಯಸಂಖ್ಯೆ 15:– ಕಚೇರಿ ಉಪಯೋಗಕ್ಕೆ ಒಂದು ಜೆರಾಕ್ಸ್ ಮಿಷನ್ ಖರೀದಿಸುವ ಬಗ್ಗೆ.**

**ಟಿಪ್ಪಣಿ:–**ಈ ಪ್ರಾಧಿಕಾರಕ್ಕೆ 2009–10ನೇ ಸಾಲಿನಲ್ಲಿ ಜೆರಾಕ್ಸ್ ಮಿಷನನ್ನು ಖರೀದಿಸಿ ಅಂದಾಜು 8 ವರ್ಷಗಳು ಕಳೆದಿದ್ದು, ಆಗಾಗ್ಗೆ ದುರಸ್ಥಿಯಾಗುತ್ತಿದ್ದು, ಇದನ್ನು ಅನೇಕ ಬಾರಿ ದುರಸ್ಥಿ ಪಡಿಸಿದ್ದರೂ ಸಹ ಕಚೇರಿಯ ಕೆಲಸ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗದ ಕಾರಣ ಹೊರಗಿನಿಂದಲೇ ಜೆರಾಕ್ಸ್ ಪ್ರತಿಗಳನ್ನು ಮಾಡಿಸುತ್ತಿರುವುದಾಗಿದೆ.

ಆದ್ದರಿಂದ ಹೊಸ ಜೆರಾಕ್ಸ್ ಮಿಷನ್‌ನ್ನು ಖರೀದಿಸಲು ಸಭಾ ಅನುಮೋದನೆಗಾಗಿ ಮಂಡಿಸಿದೆ.

**<u>ನಿರ್ಣಯ:–</u>** ಕಚೇರಿ ಅವಶ್ಯಕತೆಗೆ ಜೆರಾಕ್ಸ್ ಮಿಷನನ್ನು ಖರೀದಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

## <u>16)ವಿಷಯಸಂಖ್ಯೆ 16:– ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು:–</u>

**1)ವಿಷಯಸಂಖ್ಯೆ 1 :– ನಗರಸಭಾ ವ್ಯಾಪ್ತಿಯಲ್ಲಿ ಶೀಟ್ ಅಳವಡಿಸಿ, ಕಟ್ಟಡಗಳನ್ನು ನಿರ್ಮಿಸುತ್ತಿರುವ ಬಗ್ಗೆ.**

ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ಅನೇಕ ನಿವೇಶನಗಳಲ್ಲಿ ಶೀಟ್ ಅಳವಡಿಸಿ, ತಾತ್ಕಾಲಿಕ ಕಟ್ಟಡವನ್ನು ನಿರ್ಮಿಸುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿರುವುದಾಗಿ ಇದಕ್ಕೆ ಪ್ರಾಧಿಕಾರದಿಂದ ತಾತ್ಕಾಲಿಕ ಶೆಡ್ ನಿರ್ಮಿಸಲು ವಲಯನಿಯಾಮಾವಳಿಗಳಲ್ಲಿ ಅವಕಾಶವಿಲ್ಲದಿದ್ದು, ನಗರಸಭೆಯಿಂದಲೇ ಅನುಮತಿ ನೀಡುತ್ತಿರುವುದರಿಂದ ನಗರದ ಯೋಜಿತ ಬೆಳವಣಿಗೆಯು ಕುಂಟಿತಗೊಳ್ಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ ಎಂದು ಪ್ರಾಧಿಕಾರದ ಅಧ್ಯಕ್ಷರು ಸಭೆಯಲ್ಲಿ ವಿವರಿಸುತ್ತಾ, ಇಂತಹ ಬೆಳವಣಿಗೆಗಳನ್ನು ನಿರ್ಭಂಧಿಸುವ ಬಗ್ಗೆ ಸಭೆಯ ಗಮನ ಮತ್ತು ತೀರ್ಮಾನಕ್ಕಾಗಿ ತಂದರು.

**<u>ನಿರ್ಣಯ:–</u>** ಸಭೆ ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಇಂತಹ ಪ್ರಕರಣಗಳನ್ನು ನಗರಸಭೆ ಮತ್ತು ಪ್ರಾಧಿಕಾರದ ಅಧಿಕಾರಿ/ಇಂಜಿನಿಯರ್‌ಗಳವರು ಜಂಟಿಯಾಗಿ ಸ್ಥಳ ಪರಿಶೀಲಿಸಿ ಅವಶ್ಯವಿದ್ದಲ್ಲಿ ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ವಿಧಾನ ಸಭಾ ಸದಸ್ಯರು ತಿಳಿಸಿದರು. ಇದಕ್ಕೆ ಆಯುಕ್ತರು, ನಗರಸಭೆ, ಮಡಿಕೇರಿರರವರು ಪ್ರತಿಕ್ರಿಯೆ ನೀಡುತ್ತಾ, ಕಳೆದ ಅನೇಕ ವರ್ಷಗಳಿಂದಲೂ ಸಹ ಶೀಟ್ ಅಳವಡಿಸಿರುವ ಅನೇಕ ಕಟ್ಟಡಗಳು ನಗರಸಭಾ ವ್ಯಾಪ್ತಿಯಲ್ಲಿದ್ದು, ಇವುಗಳನ್ನು ತೆರವುಗೊಳಿಸುವುದು ಕಷ್ಟ ಸಾಧ್ಯವಾಗಿದ್ದು, ಈಗಾಗಲೇ ನಿರ್ಮಿಸಿರುವುದನ್ನು ಹೊರತುಪಡಿಸಿ ಇಂತಹ ಪ್ರಕರಣಗಳಿಗೆ ಅವಕಾಶ ನೀಡುವುದಿಲ್ಲವೆಂದು ತಿಳಿಸಿರುವುದಕ್ಕೆ ಸಭೆಯು ಒಪ್ಪಿ ಇನ್ನು ಮುಂದೆ ಶೀಟ್ ಅಳವಡಿಸಿ ಶೆಡ್‌ಗಳನ್ನು ನಿಮಿಸಲು ಅನುಮತಿ ನೀಡಬಾರದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತ್ತು.

**2)ವಿಷಯಸಂಖ್ಯೆ 2 :– ಶ್ರೀ ಲೆ॥ ಕರ್ನಲ್ ಶ್ರೀ ಕೆ.ಜಿ. ಉತ್ತಯ್ಯರವರು ದಿನಾಂಕ:25.05.2017ರಂದು ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 258/4 ರಲ್ಲಿನ 4.75ಎಕರೆ ವಿಸ್ತೀರ್ಣದ ಜಮೀನನ್ನು ಉದ್ಯಾನವನ ಮತ್ತು ಬಯಲು ಪ್ರದೇಶದಿಂದ ಕೃಷಿ ಉಪಯೋಗದ ಜಮೀನಾಗಿ ಮಹಾಯೋಜನೆಯಲ್ಲಿ ಯಥಾ ಸ್ಥಿತಿಯಲ್ಲಿ ಉಳಿಸಿಕೊಡುವಂತೆ ಕೋರಿರುವ ಬಗ್ಗೆ.**

ಸದರಿ ವಿಷಯವನ್ನು ಪ್ರಾಧಿಕಾರದ ಅಧ್ಯಕ್ಷರು ಸಭೆಯ ಗಮನಕ್ಕೆ ತಂದು ಮಡಿಕೇರಿ ನಗರದ ವ್ಯಾಪಾಕಾಭಿವೃದ್ಧಿ ಯೋಜನೆಯಲ್ಲಿ ಕೃಷಿ ಉಪಯೋಗಕ್ಕೆಂದು ಕಾಯ್ದಿರಿಸಿದ ಜಾಗವನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ಪರಿಷ್ಕೃತ–1(ಅಂತಿಮ)2021ರಲ್ಲಿ ಉದ್ಯಾನವನ ಮತ್ತು ಬಯಲು ಪ್ರದೇಶಕ್ಕೆಂದು ಕಾಯ್ದಿರಿಸಲಾಗಿರುತ್ತದೆ. ಸದರಿ ಅರ್ಜಿದಾರರು ಸೇನೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತಿಯಾಗಿದ್ದು, ಈ ಮೇಲಿನ ಜಮೀನು ಅವರ ಸ್ವಂತ ಜಮೀನಾಗಿದ್ದು, ಸದರಿಯವರು ಕೋರಿರುವಂತೆ ಉದ್ಯಾನವನ ಮತ್ತು ಬಯಲು ಪ್ರದೇಶಕ್ಕೆಂದು ಜಾಗವನ್ನು ವ್ಯಾಪಾಕಾಭಿವೃದ್ಧಿ

ಯೋಜನೆಯಲ್ಲಿ ಕಾಯ್ದಿರಿಸಿದಂತೆ ಕೃಷಿ ಜಮೀನಾಗಿಯೇ ಯಥಾ ಸ್ಥಿತಿಯನ್ನು ಕಾಯ್ದಿರಿಕೊಳ್ಳುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಸಭೆಯ ಅನುಮೋದನೆಯನ್ನು ಕೋರಿದರು.

**<u>ನಿರ್ಣಯ:–</u>** ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದ ನಂತರದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಾ, ಸದರಿ ಭೂ ಮಾಲೀಕರು ಇಲ್ಲಿಯೇ ವಾಸವಿರುವುದನ್ನು ಹಾಗೂ ಪ್ರಸ್ತಾವಿತ ಜಾಗವು ಅವರ ಸ್ವಂತ ಜಾಗವಾಗಿರುವುದನ್ನು ಪರಿಗಣಿಸಿ, ಮಹಾಯೋಜನೆಯಲ್ಲಿ ಉದ್ಯಾನವನ ಮತ್ತು ಬಯಲು ಪ್ರದೇಶಕ್ಕೆಂದು ಕಾಯ್ದಿರಿಸಿದ ಜಮೀನನ್ನು ಈ ಹಿಂದೆ ಇದ್ದಂತೆ ಕೃಷಿ ವಲಯವೆಂದೇ ಪರಿಗಣಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

ಸಹಿ/–
(ಶ್ರೀ ಎ.ಸಿ.ದೇವಯ್ಯ)
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

ಸಹಿ/–
(ಕು॥ ಎಂ.ಎನ್. ಸೌಮ್ಯ)
ಆಯುಕ್ತರು(ಪ್ರ),
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.